ಹಾಗೆ ಬೇಕಾದ್ರೆ ಮೇ ರಜೆಯಲ್ಲಿ ಹತ್ತು ದಿನ ಹೋಗಿ ಬರೋಣ' ಎಂದರು ಅಪ್ಪ. 'ಈಗ ಕೊರೊನಾ ಬೇರೆ ಬೆಂಗಳೂರಿನಲ್ಲಿ ಹೆಚ್ಚೇ ಇದೆಯಂತೆ. ಆಪತ್ತನ್ನು ನಾವೇ ಮೈಮೇಲೆ ಎಳೆದುಕೊಳ್ಳುವುದು ಯಾಕೆ? ಬೇಡ ಬಿಡು. ಮೇನಲ್ಲಿ ಹೋಗೋಣ' ಅಂದರು ಅಮ್ಮ ಕೂಡಾ, ಅಪ್ಪನ ಮಾತುಗಳನ್ನು ಒಪ್ಪಿದವರಂತೆ.

'ಹೌದು ಪುಟ್ಟ. ಹಿಂದಿನ ವರ್ಷ ಜೋಗಕ್ಕೆ ಹೋಗಿದ್ದೇವೆ. ಮಲ್ಪೆ ಬೀಚಿಗೆ ಹೋಗಿದ್ದೇವೆ. ಪಿಲಿಕುಳಕ್ಕೂ ಹೋಗಿದ್ದೇವಲ್ಲ? ಸಾಧ್ಯವಾದ್ರೆ ಮೇ ರಜೆಯಲ್ಲಿ ಹೋಗೋಣ. ಅತ್ತೆ ಮನೆಗೆ ಹೋದ ಹಾಗೂ ಆಯ್ತು' ಅಂದರು ಅಪ್ಪ.

'ಬೆಂಗಳೂರಿಗೆ ಎಲ್ಲರೂ ಹೋಗುತ್ತಿದ್ದಾರೆ. ನಾನೂ ಹೋಗ್ಬೇಕು!' ನಿಹಾಲ್ ಬೇಸರದಿಂದ ಗೊಣಗಿದ.

'ಸರಿ, ಹೋಗೋಣ. ಆದರೆ ಈಗ ಅಲ್ಲ. ಅತ್ತೆ ಕೂಡಾ ಕೊರೊನಾ ಇದೆ ಅಂತ ಎಲ್ಲೂ ತಿರುಗಾಡಲು ಹೋಗಿಲ್ಲವಂತೆ. ನಾವೂ ಜಾಗ್ರತೆಯಾಗಿ ಇರಬೇಕಲ್ಲ?'

'ನನ್ನ ಫ್ರೆಂಡ್ ಜತೆಗಾದ್ರೂ ಹೋಗ್ಲಾ ಅಪ್ಪ?' ನಿಹಾಲ್ ಮತ್ತೆ ನಿರೀಕ್ಷೆಯಿಂದ ಕೇಳಿದ.

'ಹಾಗೆಲ್ಲ ಹೋಗಬಾರದು. ಅವರೇನೋ ದಾಕ್ಷಿಣ್ಯಕ್ಕೆ ಬರಲಿ ಅಂದರೂ ನಾವು ಹೋಗುವುದು ಸರಿಯಲ್ಲ. ಬೆಂಗಳೂರು ಅಲ್ಲೇ ಇರುತ್ತದೆ. ಮುಂದಿನ ವರ್ಷ ಅಥವಾ ಕೊರೊನಾ ನಿಯಂತ್ರಣಕ್ಕೆ ಬಂದರೆ ಮೇನಲ್ಲೇ ಹೋಗೋಣ' ಅಂದರು ಅಪ್ಪ.

'ನಮ್ಮ ಕ್ಲಾಸಲ್ಲಿ ನಾನೊಬ್ಬನೇ ರಜೆಯಲ್ಲಿ ಎಲ್ಲಿಗೂ ಹೋಗದವನು!' ನಿಹಾಲ್ ಅಪ್ಪನಿಗೆ ಕೇಳಿಸಲೆಂದೇ ಅಮ್ಮನಲ್ಲಿ ಜೋರಾಗಿ ಹೇಳಿದ.

'ಹಾಗೆಲ್ಲ ಯೋಚಿಸಬೇಡ್ವೋ. ಪೂಜೆಗಳ ಮಧ್ಯೆ ರಜೆಗಳು ಮುಗಿದೇ ಹೋಗುತ್ತವೆ. ಮನೆಯವರ ಜೊತೆಗೆ ಇರುವುದರಲ್ಲೂ ನಾವು ಸಂತೋಷ ಕಾಣಬೇಕಲ್ಲ?' ಅಂದರು ಅಮ್ಮ.

ಅಮ್ಮ ಯಾವಾಗ ಅಪ್ಪನ ಮಾತುಗಳನ್ನು ಮೀರಿದ್ದಾಳೆ? ಅಪ್ಪನ ಮಾತುಗಳಿಗೇನೇ ಅಷ್ಟು ಒಗ್ಗರಣೆ ಹಾಕ್ತಾಳೆ!

'ಪುಟ್ಟೂ, ನಾವು ನಿನ್ನಿಷ್ಟದ ತಿಂಡಿಗಳನ್ನು ಮಾಡೋಣ. ಸಿಹಿ, ಖಾರ ಎಲ್ಲ ಮಾಡುವುದೇ. ಒಂದು ದಿನ ನಗರಕ್ಕೆ ಹೋಗಿ ಹೊಸ ಬಟ್ಟೆ, ಚಪ್ಪಲಿ ಖರೀದಿಸೋಣ. ಹೋಟೆಲಲ್ಲಿ ಬೇಕಾದ್ದು ತಿನ್ನೋಣ ಹಾಂ?' ಅಮ್ಮ ಉತ್ಸಾಹದಿಂದ ಹೇಳಿದರು. ನಿಹಾಲನಿಗೆ ಮಾತ್ರ ಯಾವುದರಿಂದಲೂ ಸಮಾಧಾನವಿಲ್ಲ. ಕ್ಲಾಸಿನ ಎಲ್ಲರೂ ಎಲ್ಲೆಲ್ಲಿಗೋ ಹಾಗ್ತಾರೆ. ತಾನು ಮಾತ್ರ ಎಲ್ಲಿಗೂ ಹೋಗದವನು ಅನ್ನುವ ಕೊರಗು. 'ನೀನು ಎಲ್ಲಿಗೂ ಹೋಗಲ್ವಾ?' ಅಂತ ಗೆಳೆಯರು ಪ್ರಶ್ನಿಸುವಾಗ ಅವನಿಗೆ ಅಳುವೇ ಬರುತ್ತದೆ. ಈ ಕರ್ಮಕ್ಕೆ ರಜೆಗಳು ಯಾಕೆ ಬೇಕಿದ್ದವು? ಹೀಗೆ ಮನೆಯಲ್ಲಿ ಕೂರುವ ಬದಲು ಸ್ಕೂಲಿದ್ರೇನೇ ಒಳ್ಳೆಯದಿತ್ತು ಅನಿಸುತ್ತದೆ.

ಅಮ್ಮ ಅವನಿಗಿಷ್ಟದ ತಿಂಡಿಗಳನ್ನೆಲ್ಲ ಮಾಡಿ ಡಬ್ಬಿಗಳಲ್ಲಿ ತುಂಬಿಸಿಟ್ಟರು. 'ಬೇಕು ಅನಿಸಿದಾಗ ತೆಗೆದು ತಿನ್ನೋ' ಅಂತ ಕೂಡಾ ಹೇಳಿದರು. ತಿಂಡಿಗಳನ್ನು ಕಂಡಾಗಲೂ ಅವನಿಗೆ ಬೆಂಗಳೂರಿನ ಜಪವೇ. ಹೀಗೆ ತಿಂಡಿಗಳನ್ನು ಕಟ್ಟಿಕೊಂಡು ಹೋಗಿ ಅಲ್ಲಿ ಪಾರ್ಕಿನಲ್ಲೋ ಯಾವುದಾದರೂ ಸ್ಥಳದಲ್ಲೋ ಕುಳಿತು ತಿನ್ನುವುದು ಎಷ್ಟು ಚೆನ್ನಾಗಿರುತ್ತದೆ! ಇಲ್ಲಿ ಮನೆಯಲ್ಲಿ ಕುಳಿತು ತಿನ್ನಬೇಕು. ಥೂ! ಪಕ್ಕದ ಮನೆಯ ಸಂತೋಷ ನಿಹಾಲನ ಗೆಳೆಯ. ಅವನೂ ಬೆಂಗಳೂರಿಗೆ ಹೋಗಿದ್ದಾನೆ. ಛೇ!

ಒಂದು ದಿನ ನಿಹಾಲ್ ಅಮ್ಮ ಮಾಡಿಟ್ಟಿದ್ದ ಕೆಲವು ತಿಂಡಿಗಳನ್ನು ಒಂದು ಕವರಲ್ಲಿ ತುಂಬಿಕೊಂಡು 'ಗುಡ್ಡೆಗೆ ಹೋಗಿ ಬರ್ತೇನೆ' ಎಂದು ಹೊರಟ. ಅವನು ಇದುವರೆಗೆ ಒಮ್ಮೆಯೂ ಗುಡ್ಡಕ್ಕೆ ಹೋದವನಲ್ಲ. ಎಲ್ಲ ಹುಡುಗ ಹುಡುಗಿಯರೂ ಹೋಗಿದ್ದಾರೆ, ನಾನೊಬ್ಬ ಹೋಗಿಲ್ಲ ಅನ್ನುವ ಬೇಸರದಿಂದಲೇ ಅವನು ಗುಡ್ಡ ಹತ್ತುತ್ತ ಹತ್ತುತ್ತ ಗುಡ್ಡದ ತುದಿ ತಲುಪಿದ. ಆ ಕಡೆ ಈ ಕಡೆ ನೋಡಿದ. ಮನುಷ್ಯರಾರೂ ಕಾಣುತ್ತಿಲ್ಲ. ಕೆಲವು ದನಗಳು ಮಾತ್ರ ಹುಲ್ಲನ್ನೋ ಸೊಪ್ಪನ್ನೋ ಮೇಯುತ್ತ ತಿರುಗಾಡುತ್ತಿವೆ.

ನಿಹಾಲ್ ಮರಗಳನ್ನೆಲ್ಲ ನೋಡುತ್ತ ಹೊರಟ. ಒಂದು ಮರದಲ್ಲಿ ಯಾವುದೋ ಕಾಯಿಗಳು ನೇತಾಡುತ್ತಿರುವುದನ್ನು ಕತ್ತೆತ್ತಿ ಮತ್ತೆ ಮತ್ತೆ ನೋಡಿದ. ಓ! ಅದು ನೆಲ್ಲಿಕಾಯಿಯ ಮರ! ಮರದಲ್ಲಿ ಎಷ್ಟೊಂದು ಕಾಯಿಗಳು ನೇತಾಡುತ್ತಿವೆ! ಇಷ್ಟು ಹತ್ತಿರದಲ್ಲಿ ನೆಲ್ಲಿಕಾಯಿಯ ಮರಗಳಿವೆ ಅಂತ ಅವನಿಗೆ ಇವತ್ತೇ ಗೊತ್ತಾದದ್ದು. ಅವನು ಅಲ್ಲಿ ಇಲ್ಲಿ ಹುಡುಕಾಡಿ ಒಂದು